# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎:0816-2255650,2273511ಫ್ಯಾಕ್ಸ್:0816-2270719

ಸಂಖ್ಯೆ:ತುವಿ:ಪ.ವಿ/19ನೇ ಘಟಿಕೋತ್ಸವ:2025-26/1291 ದಿನಾಂಕ:10.03.2026

## ದರಪಟ್ಟಿ ಆಹ್ವಾನ (ವಿ.ವಿ.ವೆಬ್‌ಸೈಟ್)

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಹತ್ತೊಂಭತ್ತನೆಯ ಘಟಿಕೋತ್ಸವ ಕಾರ್ಯಕ್ರಮಕ್ಕೆ ಊಟ ಮತ್ತು ಉಪಹಾರ ನಿಮಿತ್ತ ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.03.2026(ಕಂಡಿಕೆ-41).

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಹತ್ತೊಂಭತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಂದು ಉಪಹಾರ ಮತ್ತು ಊಟ ಸರಬರಾಜು ಪಡೆಯುವ ಸಂಬಂಧ ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಆಹಾರದ ವಿವರ | ಪ್ರತಿ ಒಂದಕ್ಕೆ ದರ ರೂ | ಪ್ರಮಾಣ |
|---|---|---|---|
| 1. | **ಘಟಿಕೋತ್ಸವದ ವಿಶೇಷ ಸಿಂಡಿಕೇಟ್ ಸಭೆಯ ದಿನದಂದು ಊಟ :** ಉಪ್ಪು, ಉಪ್ಪಿನಕಾಯಿ, ಹೆಸರುಬೇಳೆಕೋಸಂಬರಿ, ತರಕಾರಿಪಲ್ಯ, ಕಾಬುಲ್ ಪಲ್ಯ, ಸಬ್ಬಕ್ಕಿ ಪಾಯ್ಸ, ಹೋಳಿಗೆ, ಹಾಲು, ತುಪ್ಪ, ಅಕ್ಕಿರೊಟ್ಟಿ, ಅವರೆಕಾಳು ಉಸ್ಲಿ, ಮಂತ್ಯೆ ಬಾತ್, ಚಟ್ನಿ, ಅನ್ನ, ಸಾಂಬರ್, ಮೊಸರು, ಬಾಳೆಹಣ್ಣು, ಬೀಡಾ, ವಾಟರ್ ಬಾಟಲ್ (1/2 ಲೀಟರ್) | ಒಂದಕ್ಕೆ | **200** ಜನಕ್ಕೆ |
| 2. | **ಘಟಿಕೋತ್ಸವ ದಿನದಂದು ಉಪಹಾರ :** ಉಪ್ಪಿಟ್ಟು, ಕೇಸರಿಬಾತ್, ಕಾಫಿ & ಟೀ | ಒಂದಕ್ಕೆ | 500 ಜನಕ್ಕೆ |
| 3. | **ಘಟಿಕೋತ್ಸವದಂದು ಅತಿಥಿಗಳಿಗೆ ಊಟ :** ಟೊಮಾಟೊ ಸೂಪ್, ಗ್ರೀನ್‌ಸಲಾಡ್, ಕೋಸಂಬರಿ, ಬೆಂಡೆಕಾಯಿ ಫ್ರೈ, ಬೇಬಿ ಕಾರ್ನ್ ಮಂಚೂರಿಯನ್, ಅಕ್ಕಿರೊಟ್ಟಿ, ಚಟ್ನಿ, ವೆಜಿಟೇಬಲ್ ಕರಿ, ಹೋಳಿಗೆ-ಸೀಕರಣೆ, ಗೀರೈಸ್, ಕುರ್ಮಾ, ಅನ್ನ ಸಾಂಬರ್, ರಸಂ, ಮೊಸರು, ಮಜ್ಜಿಗೆ, ಫ್ರೂಟ್‌ಸಲಾಡ್, ಐಸ್‌ಕ್ರೀಮ್, ಬೀಡಾ. | ಒಂದಕ್ಕೆ | 250 ಜನಕ್ಕೆ |
| 4. | **ಘಟಿಕೋತ್ಸವದಂದು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಊಟ :** ಅಕ್ಕಿರೊಟ್ಟಿ, ಚಟ್ನಿ, ಜಾಹಂಗೀರ್, ಕೋಸಂಬರಿ, ಹುರುಳಿಕಾಯಿ ಪಲ್ಯ, ಪಲಾವ್-ಮೊಸರುಬಜ್ಜಿ, ಅನ್ನ ಸಾಂಬರ್, ಮೊಸರು, ಮಜ್ಜಿಗೆ, ಬಾಳೆಹಣ್ಣು, ಐಸ್‌ಕ್ರೀಮ್, ಬೀಡಾ. | ಒಂದಕ್ಕೆ | 600 ಜನಕ್ಕೆ |
| 5. | **ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಊಟ :** ಜಾಹಂಗೀರ್, ಕೋಸಂಬರಿ, ಮೆಣಸಿನಕಾಯಿ ಬಜ್ಜಿ, ಪಲಾವ್-ಮೊಸರುಬಜ್ಜಿ, ಅನ್ನ ಸಾಂಬರ್, ಮೊಸರು, ಮಜ್ಜಿಗೆ | ಒಂದಕ್ಕೆ | 1200 ಜನಕ್ಕೆ |
| 6. | **ಘಟಿಕೋತ್ಸವ ದಿನದಂದು ಸಂಜೆ ಲಘು ಉಪಹಾರ : ಶಾವಿಗೆ ಬಾತ್, ಕಾಶಿ ಹಲ್ವ, ಬೋಂಡ,** ಕಾಫಿ & ಟೀ | ಒಂದಕ್ಕೆ | 300 ಜನಕ್ಕೆ |

**ಷರತ್ತು ಮತ್ತು ನಿಬಂಧನೆಗಳು:**

1. ಮುಚ್ಚಿದ ಲಕೋಟೆಯ ಮೇಲೆ **"ಹತ್ತೊಂಭತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಂದು ಉಪಹಾರ ಮತ್ತು ಊಟ ಸರಬರಾಜು ಮಾಡುವ ಸಂಬಂಧ ದರಪಟ್ಟಿ"** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. ದರಪಟ್ಟಿಗಳನ್ನು **ಕುಲಸಚಿವರು(ಮೌಲ್ಯಮಾಪನ), ಪರೀಕ್ಷಾ ಭವನ ಕಾರ್ಯಾಲಯ, ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗಿರುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 24.03.2026 ಅಪರಾಹ್ನ 04-00.**

(ಮು.ತಿ.ನೋ)

4. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
5. ಸಮಾರಂಭ ನಡೆದ 30 ದಿನಗಳೊಳಗೆ ಹುಂಡಿಯನ್ನು ವಿಶ್ವವಿದ್ಯಾನಿಲಯದ ನಿಯಮಾನುಸಾರ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.
6. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
7. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
8. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
9. ದರಪಟ್ಟಿಯಲ್ಲಿ ನಮೂದಿಸಿರುವ ಪ್ರಮಾಣವನ್ನು ಹೆಚ್ಚಿಸುವ, ಕಡಿಮೆಗೊಳಿಸುವ ಅಥವಾ ರದ್ದು ಪಡಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
10. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.

ಆದೇಶದ ಮೇರೆಗೆ,

10/03/26

ಕುಲಸಚಿವರು (ಮೌಲ್ಯಮಾಪನ)

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.(ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
4. ಕಚೇರಿ ಪ್ರತಿ.